**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.536/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸೌದತ್ ಬಿ.ಎಸ್ | ಪ್ರಾಸಾ -1 |
| ತಂದೆಯ ಹೆಸರು | : ಸುಧೀರ್ | ಚಾಸಾ-1 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ 29.04.2025 |
| ವಾಸಸ್ಥಳ | : ಬಣಕಲ್ ಹೋಬಳಿ, ಮೂಡಿಗೆರೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ಯನ್ನು ನಾನು ಹಿಂದೆ ಎಂದು ನೋಡಿರುವುದಿಲ್ಲ. ಚಾಸಾ-2 ನನ್ನ ತಂದೆ.

ದಿ.18.02.2024 ರಂದು 15 ಗ್ರಾಂ 850 ಮಿಲಿಗ್ರಾಂ ತೂಕವಿರುವ ಚಿನ್ನದ ಸರವು ನಮ್ಮ ಮನೆಯ ವಾರ್ ಡ್ರೋಬ್ ನಿಂದ ಕಳುವಾಗಿರುತ್ತದೆ. ಸದರಿ ವಿಷಯವು 2-3 ದಿನಗಳ ನಂತರ ನನ್ನ ಗಮನಕ್ಕೆ ಬಂದಿರುತ್ತದೆ. ನಂತರ ನಾನು ಬಣಕಲ್ ಪೋಲಿಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೇನೆ. ನಂತರ ಪೋಲಿಸರು ಸದರಿ ಚಿನ್ನದ ಸರವನ್ನು ಹುಡುಕಿಕೊಟ್ಟಿರುತ್ತಾರೆ.

ಸಾಕ್ಷಿಯು ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಮತ್ತು ಅದರಲ್ಲಿವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ಥಳ ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದರಲ್ಲಿರುವ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಅವರಿರುವುದನ್ನು ಗುರುತಿಸುತ್ತಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾಹನ ಬಿಡುಗಡೆ ಕಾಲದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿಪಿ-4, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ತಾವು ಇರುವ ಬಗ್ಗೆ ಗುರತಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಸಿಡಿಯನ್ನು ತೋರಿಸಲಾಗಿ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಮತ್ತು ಕಲಂ 65(ಬಿ) ಧೃಢೀಕೃತ ಪ್ರತಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಸಹಿಯನ್ನು ಗುರುತಿಸಿದ ದಾಖಲೆಯಲ್ಲಿ ಏನನ್ನು ಬರೆದಿದೆ ಎಂದು ನನಗೆ ತಿಳಿದಿರುವುದ್ಲಿ ಮತ್ತು ಈ ಕೃತ್ಯವನ್ನು ಯಾರು ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:**

ದಿ.22.02.2024 ರಂದು ಸ.6.00 ಸಮಯಕ್ಕೆ ನಾನು ಪೂಜಾ ಕಾರ್ಯಕ್ರಮಕ್ಕೆ ಹೋಗಲು ಬೀರು ತೆಗೆದ ಸಮಯದಲ್ಲಿ ನನಗೆ ಚಿನ್ನ ಕಳುವಾಗಿರುವ ವಿಷಯ ತಿಳಿದುಬಂದಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಿ.26.02.2024 ರಂದು ನಾನು ಬಣಕಲ್ ಪೋಲಿಸ್ ಠಾಣೆಗೆ ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ. ಅದೇ ದಿನ 2.00 ರ ಸಮಯಕ್ಕೆ ಪೋಲಿಸರು ನಿಪಿ-2 ರಂತೆ ನನ್ನ ಸಮಕ್ಷಮದಲ್ಲಿ ಸ್ಥಳ ಮಹಜರ್ ಮಾಡಿರುತ್ತಾರೆ. ಅದೇ ಸಂದರ್ಭದಲ್ಲಿ ನಿಪಿ-3 ರಂತೆ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ದಿ.05.04.2024 ರಂದು ನಿಪಿ-4 ರಂತೆ ನಾನು ಚಿನ್ನದ ಸರವನ್ನು ಹಿಂಪಡೆದಿರುತ್ತೇನೆ ಎಂದರೆ ಸರಿ. ನಮ್ಮ ಮನೆಯಲ್ಲಿ ಕಳುವಾದ ಚಿನ್ನವು 15 ಗ್ರಾಂ 850 ಮಿಲಿಗ್ರಾಂ ಇತ್ತು ಎಂದರೆ ಸರಿ. ನಂತರ ಬಣಕಲ್ ಪೋಲಿಸ್ ಠಾಣೆಯ ಪೋಲಿಸರು ನಿಮ್ಮ ಚಿನ್ನದ ಸರವನ್ನು ಕದ್ದಂತಹ ಆರೋಪಿಯನ್ನು ಹಿಡಿದಿರುತ್ತೇವೆ ಅವರು ಗುರುತುವಿಕೆಗಾಗಿ ನನ್ನನ್ನು ಪೋಲಿಸ್ ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯು ಸದರಿ ವ್ಯಕ್ತಿಯೆಂದು ನನಗೆ ತಿಳಿದಿರುವುದಿಲ್ಲ.ಈ ನ್ಯಾಯಾಲಯದ ಮುಂದೆ ಇರುವ ಆರೋಪಿಯು ನಮ್ಮ ತೋಟದಲ್ಲಿ 8 ವರ್ಷದಿಂದ ಕೂಲಿ ಕೆಲಸ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ನಿಮ್ಮ ಮನೆಯಿಂದ ಚಿನ್ನದ ಸರವನ್ನು ಕದ್ದಿದ್ದರು ಅವರಿಗೆ ಶಿಕ್ಷೆಯನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯಕ್ಕೆ ಕುರಿತಂತೆ ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್ ವಕೀಲರಿಂದ**

ನಿಪಿ-1 ನಾನು ಪೋಲಿಸ್ ರವರಿಗೆ ನೀಡಿದ ದೂರಾಗಿರುತ್ತದೆ. ನಿಪಿ-2 ರಲ್ಲಿ ಪೋಲಿಸರು ಯಾವುದರ ಕುರಿತು ಬರೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಪೋಲಿಸರ ಕೋರಿಕೆಯ ಮೇರೆಗೆ ನಿಪಿ-2 ರಲ್ಲಿ ಸಹಿಯನ್ನು ಮಾಡಿರುತ್ತೇನೆ. ನಿಪಿ-3 ಮತ್ತು 5 ನ್ನು ಯಾವ ವಿಷಯಕ್ಕೆ ಸಂಬಂಧಿಸಿದಂತೆ ತೆಗೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.